**ಭಾರತದ ಭೂಭಾಗವೇ ಆಗಿರುವ, ಪ್ರಸಕ್ತ 'ಪಾಕ್ ಆಕ್ರಮಿತ ಕಾಶ್ಮೀರ' (Pak Occupied Kashmir) ಎಂದು ಕರೆಯಲ್ಪಡುವ ಭೂಭಾಗವನ್ನು ಈ ವರದಿಯು 'ಪಾಕ್ ಆಡಳಿತಕ್ಕೊಳಪಟ್ಟ ಕಾಶ್ಮೀರ' (Pak Administered Kashmir) ಎಂದು ಉಲ್ಲೇಖಿಸಿ ಪಾಕ್ ಪ್ರೇಮವನ್ನು ಪ್ರಕಟಿಸಿದೆ.**

## ಇವರುಗಳನ್ನು ನಂಬಿ ಜಮ್ಮು ಕಾಶ್ಮೀರವನ್ನು ಉಳಿಸಲು ಸಾಧ್ಯವೇ?

**ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳುತ್ತಾರೆ...**

- ಭಾರತದ ಇತರ ರಾಜ್ಯಗಳಂತೆ ಜಮ್ಮು ಕಾಶ್ಮೀರ ಸ್ವತಂತ್ರ ಭಾರತದಲ್ಲಿ ಸಂಪೂರ್ಣ ವಿಲಯನವಾಗಿಲ್ಲ. ವಿಲಯನಕ್ಕೆ ಮುನ್ನ ಹಾಕಿದ್ದ ಕೆಲವು ಷರತ್ತುಗಳನ್ನು ಭಾರತ ಪೂರ್ಣಗೊಳಿಸಿಲ್ಲ.
- ಸಂಪೂರ್ಣ ಸ್ವಾಯತ್ತೆಯೊಂದೇ ಏಕೈಕ ಪರಿಹಾರ. 1953ಕ್ಕೆ ಮುಂಚಿನ ಪರಿಸ್ಥಿತಿಯ ನಿರ್ಮಾಣವಾಗಬೇಕಿದೆ.
- ಕಾಶ್ಮೀರದ ಪ್ರತ್ಯೇಕತಾವಾದಿಗಳ ಕೂಗನ್ನು ನಾವು ಆಲಿಸಬೇಕು. ಅವರ ಬೇಡಿಕೆಗಳನ್ನು ಪರಿಗಣಿಸದೇ ಕಾಶ್ಮೀರ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ.

**ಕೇಂದ್ರ ಗೃಹಸಚಿವ ಪಿ. ಚಿದಂಬರಂ ಹೇಳುತ್ತಾರೆ...**

- ಜಮ್ಮು ಕಾಶ್ಮೀರ ಭೌಗೋಳಿಕವಾಗಿ ಮತ್ತು ಚಾರಿತ್ರಿಕವಾಗಿ ಭಾರತದ ಇತರ ಭಾಗಗಳಿಗಿಂತ ಸಂಪೂರ್ಣ ವಿಶಿಷ್ಟವಾಗಿರುವ ಭೂಪ್ರದೇಶ. ಆದ್ದರಿಂದ ಭಾರತಕ್ಕಿಂತ ಪ್ರತ್ಯೇಕವಾಗಿರುವುದು ಅದರ ಸಹಜಗುಣ.
- ಜಮ್ಮು ಕಾಶ್ಮೀರದ ಬಗ್ಗೆ ಗುಪ್ತ ಮಾತುಕತೆಗಳು ನಡೆಯುತ್ತಿವೆ. ಪರಿಹಾರ ಏನೆಂಬುದು ಮುಂದೆ ತಿಳಿಯುತ್ತದೆ.
- ಜಮ್ಮು ಕಾಶ್ಮೀರದ ವಿಲಯನವು ಒಂದು ವಿಚಿತ್ರವಾದ ಸ್ಥಿತಿಯಲ್ಲಿ ನಡೆಯಿತು. ಅದು ಉಳಿದ ರಾಜ್ಯಗಳಿಗಿಂತ ಭಿನ್ನವಾಗಿತ್ತು. ಹಾಗಾಗಿ ಒಮರ್ ಅಬ್ದುಲ್ಲಾ ವಿಲಯನದ ಬಗ್ಗೆ ವಿಧಾನ ಸಭೆಯಲ್ಲಿ ಏನನ್ನು ಮಾತನಾಡಿದ್ದರೋ ಅವಾವುವೂ ತಪ್ಪಾಗಿರಲಿಲ್ಲ.
- ಸಂಪೂರ್ಣ ಸ್ವಾಯತ್ತೆಯ ಬಗ್ಗೆ ಮಾತುಕತೆ ಮತ್ತು ವಿಚಾರ ಮಾಡಲಾಗುವುದು.

**ಸಂವಾದಕಾರ ದಿಲೀಪ್ ಪಡಗಾಂವ್‌ಕರ್ ಹೇಳುತ್ತಾರೆ...**

- ನಮಗೆ ಸುಂದರವಾದ ಸಂವಿಧಾನವಿದೆ. ಅಲ್ಲಿ ಎಲ್ಲರ ಭಾವನೆಗಳನ್ನೂ ಗೌರವಿಸಲಾಗುತ್ತದೆ. ಅದು 400 ಬಾರಿ ತಿದ್ದುಪಡಿಗೊಂಡಿದೆ. ಹಾಗಾಗಿ ಜಮ್ಮು ಕಾಶ್ಮೀರದ ಸ್ವಾತಂತ್ರ್ಯಕ್ಕೆ ದಾರಿ ಇನ್ನೂ ಇದೆ.

## ಇವು ನಮ್ಮನ್ನು ಕೆರಳಿಸುವುದಿಲ್ಲವೇ...?

- ಜಾಗತಿಕ ವೇದಿಕೆಗಳಲ್ಲಿ ಪಾಕಿಸ್ಥಾನ ಜಮ್ಮು ಕಾಶ್ಮೀರವನ್ನು ತನ್ನ ನೆಲವೆಂದು ಪ್ರತಿಪಾದಿಸಿದಾಗ...
- ಗೂಗಲ್‌ನ ನಕ್ಷೆಯಲ್ಲಿ ಜಮ್ಮು ಕಾಶ್ಮೀರವನ್ನು ವಿವಾದಿತ ಪ್ರದೇಶವೆಂದು ನಮೂದಿಸಿದಾಗ...
- ವೆಬ್‌ಸೈಟ್‌ಗಳಲ್ಲಿ ಪಾಕ್ ಆಕ್ರಮಿತ ಜಮ್ಮು ಕಾಶ್ಮೀರವನ್ನು ಪಾಕಿಸ್ಥಾನದ ಭಾಗವಾಗಿ ತೋರಿಸಿದಾಗ...
- ಅರುಣಾಚಲ ಪ್ರದೇಶವನ್ನು ಚೀನಾ ತನ್ನದೆಂದು ಘೋಷಿಸಿಕೊಂಡಾಗ...
- ಭಾರತ ಸರ್ಕಾರ ತನ್ನ ಬೊಕ್ಕಸದಿಂದ ಕೋಟ್ಯಂತರ ರೂಪಾಯಿಗಳನ್ನು ಕಾಶ್ಮೀರದ ಪ್ರತ್ಯೇಕತೆಯನ್ನು ಪೋಷಿಸುವ ವರದಿಗಾಗಿ ಬಳಸುವಾಗ, ಅಂಥ ವರದಿಯನ್ನು ನಮ್ಮ ಸರ್ಕಾರ ಉತ್ಸಾಹದಿಂದ ಮೆಚ್ಚಿಕೊಂಡಾಗ...

**ಜಮ್ಮು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ. ಇದು ನಮ್ಮೆಲ್ಲರ ದೃಢಸಂಕಲ್ಪವಾಗಲಿ ಮಾಡು, ಇಲ್ಲವೇ ಮಡಿ – ಎಂಬ ಹಂತದಲ್ಲಿರುವ ಕಾಶ್ಮೀರದ ಸಮಸ್ಯೆಯ ಕುರಿತು ಭಾರತೀಯರೆಲ್ಲರೂ ಎಚ್ಚರಗೊಳ್ಳೋಣ.**

### ನಿಮ್ಮ ಧ್ವನಿ ಹೊರಡಲಿ – ಜಮ್ಮು ಕಾಶ್ಮೀರ ತಲುಪಲಿ – ದೇಶಕ್ಕದು ಶಕ್ತಿಯಾಗಲಿ

## ಸಂವಾದಕಾರರ ವರದಿಗೆ ಧಿಕ್ಕಾರ

### ವರದಿಯನ್ನು ತಿರಸ್ಕರಿಸೋಣ – ಸರ್ಕಾರಕ್ಕೆ ಚುರುಕು ಮುಟ್ಟಿಸೋಣ

## ಜಮ್ಮು ಕಾಶ್ಮೀರ ಉಳಿಸಿ ಹೋರಾಟ ಸಮಿತಿ, ಕರ್ನಾಟಕ




## ಜಮ್ಮು ಕಾಶ್ಮೀರ ಸಂವಾದಕಾರರು ನೀಡಿರುವ ರಾಷ್ಟ್ರವಿರೋಧಿ ವರದಿಯನ್ನು ವಿರೋಧಿಸಿ

# ಬೃಹತ್ ಪ್ರತಿಭಟನೆ

**ಬನ್ನಿ, ರಾಷ್ಟ್ರವಿರೋಧಿ ಶಕ್ತಿಗಳನ್ನು ಧಿಕ್ಕರಿಸೋಣ**

| | | |
|---|---|---|
| 6 ಜುಲೈ 2012<br>ಶುಕ್ರವಾರ | ಬೆಳಿಗ್ಗೆ 10.30ಕ್ಕೆ | ಟೌನ್‌ಹಾಲ್ ಎದುರು<br>ಬೆಂಗಳೂರು |

# ಜಮ್ಮು ಕಾಶ್ಮೀರ ಕುರಿತ ಸಂವಾದಕಾರರ ವರದಿ : ಮತ್ತೊಂದು ವಿಭಜನೆಗೆ ನಾಂದಿ

ಭಾರತ ಸರ್ಕಾರದ ಗೃಹ ಸಚಿವಾಲಯವು 2010ರ ಅಕ್ಟೋಬರ್ 13ರಂದು ಜಮ್ಮು ಕಾಶ್ಮೀರದ ಸಮಸ್ಯೆಗೆ ಪರಿಹಾರವನ್ನು ಹುಡುಕುವ ನಿಟ್ಟಿನಲ್ಲಿ ಪತ್ರಕರ್ತ ದಿಲೀಪ್ ಪಡಗಾಂವ್‌ಕರ್, ಪ್ರೊ॥ ರಾಧಾ ಕುಮಾರ್, ಎಂ.ಎಂ. ಅನ್ಸಾರಿ – ಈ ಮೂವರು ಸಂವಾದಕಾರರ ತಂಡವೊಂದನ್ನು ರಚನೆ ಮಾಡಿತ್ತು. ಆ ತಂಡ 2011ರ ಅಕ್ಟೋಬರ್ 12ರಂದು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತ್ತು. ಆದರೆ 7 ತಿಂಗಳವರೆಗೆ ತನ್ನಲ್ಲಿ ಗುಪ್ತವಾಗಿಟ್ಟುಕೊಂಡಿದ್ದ ವರದಿಯನ್ನು ಸರ್ಕಾರ 2012ರ ಮೇ 24ರಂದು ಸಾರ್ವಜನಿಕರ ಮುಂದಿಟ್ಟಿತು. ಈ ವರದಿ ಅಸಂಬದ್ಧವಷ್ಟೇ ಅಲ್ಲದೇ ದೇಶದ ಏಕತೆ, ಅಖಂಡತೆ ಮತ್ತು ಸಾರ್ವಭೌಮತೆಗೆ ಧಕ್ಕೆಯಾಗುವಂತಿರುವುದು ಮೇಲುನೋಟಕ್ಕೇ ಗೋಚರಿಸುತ್ತಿದ್ದು ಒಂದರ್ಥದಲ್ಲಿ ಪ್ರತ್ಯೇಕತಾವಾದಿಗಳ ಬೇಡಿಕೆಗೆ ಅಧಿಕೃತ ಮುದ್ರೆಯೊತ್ತಿದಂತಿದೆ.

ತ್ರಿಸದಸ್ಯರ ತಂಡದಲ್ಲಿನ ಇಬ್ಬರು ಸದಸ್ಯರು ಐಎಸ್‌ಐ ಏಜೆಂಟ್ ಡಾ. ಗುಲಾಮ್ ಮಹಮ್ಮದ್ ಫಾಯಿ ಆಯೋಜಿಸಿದ್ದ ವಿಚಾರಸಂಕಿರಣವೊಂದರಲ್ಲಿ ಭಾಗವಹಿಸಿದ್ದ ಆರೋಪವನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಈ ವರದಿಯ ಉದ್ದೇಶ ಮತ್ತು ವಿಶ್ವಾಸಾರ್ಹತೆಯ ಬಗ್ಗೆಯೇ ಸಂಶಯ ಬರುತ್ತದೆ. ಈ ವರದಿಯು ಸಂಪೂರ್ಣ ಜಮ್ಮು ಕಾಶ್ಮೀರದ ವಿವಿಧ ಜನವರ್ಗಗಳಿಗೆ ಒಳಿತನ್ನು ಮಾಡಹೊರಟಂತಿಲ್ಲ. ಬದಲಿಗೆ ಕೇಂದ್ರ ಸರ್ಕಾರ ಮತ್ತು ಜಮ್ಮು ಕಾಶ್ಮೀರ ರಾಜ್ಯ ಸರ್ಕಾರಗಳನ್ನು ಮೆಚ್ಚಿಸುವುದಕ್ಕಾಗಿ ನಿರ್ಮಾಣವಾದಂತಿದೆ. ಕೆಲವೇ ಕೆಲವು ಜನರನ್ನು ಓಲೈಸಿ, ಆ ಮೂಲಕ ಪ್ರತ್ಯೇಕತಾವಾದಿಗಳ ಪರವಹಿಸುತ್ತಿದೆ ಈ ವರದಿ.

**ಜಮ್ಮು ಕಾಶ್ಮೀರ ನಿರಂತರವಾಗಿ ಹೊತ್ತಿ ಉರಿಯುತ್ತಿರುವ ರಾಜ್ಯ. ಭಾರತದೊಂದಿಗಿನ ಸಂಬಂಧವನ್ನು ಕತ್ತರಿಸಿಕೊಂಡು ಪ್ರತ್ಯೇಕ ಅಸ್ತಿತ್ವ ಘೋಷಿಸಿಕೊಳ್ಳುವ ಪ್ರತ್ಯೇಕತಾವಾದಿಗಳ ಹುನ್ನಾರ, ಪಾಕಿಸ್ತಾನದ ಜೊತೆ ಕೈಜೋಡಿಸುವ ಸಂಚು, ಇಂತಹ ವಿಘಟನಕಾರೀ ಶಕ್ತಿಗಳಿಗೆ ಪರೋಕ್ಷವಾಗಿ ನೀರು–ಗೊಬ್ಬರ ಎರೆಯುವ ಅಲ್ಲಿನ ಚುನಾಯಿತ ರಾಜ್ಯ ಸರ್ಕಾರ, ಕಾಶ್ಮೀರದ ಪ್ರತ್ಯೇಕತಾವಾದಿ ಚಳುವಳಿಗೆ ಬಹಿರಂಗವಾಗಿಯೇ ಮಾನ್ಯತೆ ತಂದುಕೊಡುತ್ತಿರುವ ಬುದ್ಧಿಜೀವಿಗಳ ಪ್ರವೃತ್ತಿ, ಗಣರಾಜ್ಯೋತ್ಸವದ ದಿನವೂ ಭಾರತದ ತ್ರಿವರ್ಣ ಧ್ವಜ ಹಾರಿಸಲಾಗದ ದುಃಸ್ಥಿತಿ! ಹೀಗೆ ಜಮ್ಮು ಕಾಶ್ಮೀರದ ಸ್ಥಿತಿ ಹೃದಯವಿದ್ರಾವಕವಾಗಿದ್ದು ಅರಾಜಕತೆ ತಾಂಡವ ವಾಡುತ್ತಿರುವ ಈ ಸಂದರ್ಭದಲ್ಲಿ ಸಂವಾದಕಾರರು ಸೂಚಿಸಿದ ಸಲಹೆಗಳು ಭಯಾನಕವಾಗಿದ್ದು, ವರದಿಯ ರಾಷ್ಟ್ರನಿಷ್ಠೆಯೇ ಪ್ರಶ್ನಾರ್ಥಕ ಎನಿಸಿದೆ.**

| ಸಂವಾದಕಾರರ ವರದಿಯಲ್ಲಿ ಹೇಳಿದ್ದೇನು? | ದೇಶಭಕ್ತರ ಉತ್ತರವೇನು? |
|---|---|
| ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿರುವ 370ನೇ ವಿಧಿ ರಾಜ್ಯದಲ್ಲಿ ಸದಾ ಜಾರಿಯಲ್ಲಿರಬೇಕು. 370ನೇ ವಿಧಿಯಲ್ಲಿ ಉಲ್ಲೇಖಿತವಾಗಿರುವ 'ತಾತ್ಕಾಲಿಕ' ಎಂಬ ಶಬ್ದದ ಜಾಗದಲ್ಲಿ 'ವಿಶೇಷ' ಎಂದು ಉಲ್ಲೇಖಿಸಬೇಕು. | 370ನೇ ವಿಧಿಯನ್ನು ಸಂವಿಧಾನ ನಿರ್ಮಾತೃಗಳು ತಾತ್ಕಾಲಿಕ ಎಂದೇ ಉಲ್ಲೇಖಿಸಿ ನಮ್ಮ ಸಂವಿಧಾನದಲ್ಲಿ ಸೇರಿಸಿದ್ದಾರೆ. ಶೇಖ್ ಅಬ್ದುಲ್ಲಾ ಕೂಡಾ ಸಂವಿಧಾನ ಸಭೆಯ ಸದಸ್ಯನಾಗಿದ್ದು ಆತ ಕೂಡ ಈ ನಿಯಮಕ್ಕೆ ಬದ್ಧನೆಂದು ಒಪ್ಪಿದ್ದ. |
| ಗಡಿ ಪ್ರದೇಶದಲ್ಲಿ ಮುಕ್ತ ಸಂಚಾರ ಮತ್ತು ವ್ಯಾಪಾರಕ್ಕೆ ಅವಕಾಶ ಕೊಡಬೇಕು. ಇದು ಎರಡೂ ದೇಶಗಳ ನಡುವಿನ ಸಂಬಂಧ ಸುಧಾರಣೆಗೆ ಸಹಾಯಕ. ಪ್ರತ್ಯೇಕತಾವಾದಿಗಳು, ಆಜಾದ್ ಜಮ್ಮು ಕಾಶ್ಮೀರ ಸರ್ಕಾರ, ಪಾಕಿಸ್ಥಾನ, ಚೀನಾಗಳೊಂದಿಗೆ ಸಂಬಂಧ ಸುಧಾರಿಸುವ ಪ್ರಯತ್ನ ಸಫಲವಾಗುತ್ತದೆ. | ಸದ್ಯದ ಪರಿಸ್ಥಿತಿಯಲ್ಲಿ ಇದು ಹಾಸ್ಯಾಸ್ಪದ ಮತ್ತು ತೀರಾ ಅವೈಜ್ಞಾನಿಕ. ಇದರಿಂದಾಗಿ, ಕಾಶ್ಮೀರದ ವಿವಾದವು ಭಾರತದ ಆಂತರಿಕ ವಿಷಯ ಎಂಬ ಭಾರತದ ದಶಕಗಳಷ್ಟು ಹಳೆಯ ನಿಲುಮೆಯನ್ನು ಕೈಬಿಟ್ಟು ಪಾಕ್ ಆಕ್ರಮಿತ ಜಮ್ಮು ಕಾಶ್ಮೀರಕ್ಕೆ ಅಧಿಕೃತ ಮಾನ್ಯತೆ ಕೊಟ್ಟಂತಾಗುತ್ತದೆ. |
| ನೆಹರೂ–ಶೇಖ್ ಒಪ್ಪಂದದ ಆಧಾರದಲ್ಲಿ 1952ರ ಅನಂತರ ಜಾರಿಯಾದ ಸಂವಿಧಾನದ ಅನುಚ್ಛೇದಗಳು ಮತ್ತು ಕಾನೂನುಗಳ ಸಮೀಕ್ಷೆಗಾಗಿ ಸಾಂವಿಧಾನಿಕ ಸಮಿತಿಯೊಂದನ್ನು ರಚಿಸಬೇಕು. 370ನೇ ವಿಧಿಯನ್ವಯ ರಾಜ್ಯದ ಸಂಪೂರ್ಣ ಸ್ವಾಯತ್ತೆಯನ್ನು ಭಂಗಗೊಳಿಸುವ ಕಾನೂನುಗಳನ್ನು ಹಿಂಪಡೆಯಬೇಕು. | 370ನೇ ವಿಧಿಯು ಭಾರತದ ಸಂವಿಧಾನವನ್ನು ಜಾರಿಗೊಳಿಸಲು ಇರುವ ಒಂದು ತಾಂತ್ರಿಕ ವ್ಯವಸ್ಥೆಯೇ ಹೊರತು ಸ್ವಾಯತ್ತೆ ನೀಡುವುದಕ್ಕಾಗಿಯಲ್ಲ. ಭಾರತದ ಉಳಿದ 120 ಕೋಟಿ ಜನರಿಗೆ ಒಳಿತನ್ನು ಮಾಡುವ ಭಾರತದ ಕಾನೂನುಗಳು ಜಮ್ಮು ಕಾಶ್ಮೀರದ 1.20 ಕೋಟಿ ಜನರಿಗೆ ಕೆಡುಕಾಗುವುದು ಹೇಗೆ? |
| ಕೇಂದ್ರ ಸರ್ಕಾರದಿಂದ ನಿಯೋಜಿಸಲ್ಪಡುವ ಅಧಿಕಾರಿಗಳ (ಐಎಎಸ್, ಐಪಿಎಸ್) ಸಂಖ್ಯೆಯನ್ನು ಕ್ರಮೇಣ ಕಡಿಮೆ ಮಾಡುತ್ತಾ ಬರುವುದು ಮತ್ತು ರಾಜ್ಯ ಸರ್ಕಾರದಿಂದ ನಿಯೋಜಿಸಲ್ಪಡುವ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವುದು. | ಇತರ ರಾಜ್ಯಗಳಲ್ಲಿ 66:34 ರಷ್ಟು ಇರುವ ಈ ಅನುಪಾತ ಜಮ್ಮು ಕಾಶ್ಮೀರದಲ್ಲಿ ಈಗಾಗಲೇ 50:50 ರಷ್ಟಿದೆ. ಇದನ್ನು ಮತ್ತಷ್ಟು ಕಡಿತಗೊಳಿಸುವ ಶಿಫಾರಸ್ಸು ಎಂದರೆ ಭಾರತದ ಹಿಡಿತದಿಂದ ಜಮ್ಮು ಕಾಶ್ಮೀರವನ್ನು ತಪ್ಪಿಸುವುದೆಂದೇ ಅರ್ಥ. |
| ರಾಜ್ಯಪಾಲರು ಮತ್ತು ಮುಖ್ಯಮಂತ್ರಿ ಹುದ್ದೆಗಳ ಹೆಸರುಗಳನ್ನು ಉರ್ದುವಿನಲ್ಲಿ ಬಳಸುವುದು. ರಾಜ್ಯಪಾಲರನ್ನು 'ಸದರ್–ಎ–ರಿಯಾಸತ್' ಎಂದೂ ಮುಖ್ಯಮಂತ್ರಿಗಳನ್ನು 'ವಜೀರ್–ಎ–ಅಜಾಮ್' ಎಂದು ಬದಲಾಯಿಸುವುದು. ರಾಜ್ಯಪಾಲರ ಸ್ಥಾನಕ್ಕೆ ಹೆಸರನ್ನು ಶಿಫಾರಸ್ಸು ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ. | ಉರ್ದು ಹೆಸರನ್ನು ಶಿಫಾರಸು ಮಾಡಿರುವುದು ತುಷ್ಟೀಕರಣದ ಇನ್ನೊಂದು ತಂತ್ರ ಅಷ್ಟೇ. ಯಾವುದೇ ರಾಜ್ಯದ ರಾಜ್ಯಪಾಲರೆಂದರೆ ಅವರು ರಾಷ್ಟ್ರಪತಿಗಳ ಪ್ರತಿನಿಧಿ. ರಾಜ್ಯ ಸರ್ಕಾರಗಳ ಮೂಲಕ ರಾಜ್ಯಪಾಲರ ನೇಮಕಕ್ಕೆ ಸಂವಿಧಾನವು ಅವಕಾಶ ಕೊಡುವುದಿಲ್ಲ. ರಾಷ್ಟ್ರಪತಿಗಳ ಅಧಿಕಾರ ಮೊಟಕುಗೊಳಿಸುವ ಆಘಾತಕಾರಿ ಸಲಹೆ ಇದಾಗಿದೆ. |
| ದೇಶದ ಆಂತರಿಕ ಮತ್ತು ಬಾಹ್ಯ ಸುರಕ್ಷೆ, ಆರ್ಥಿಕ ಹಿತಾಸಕ್ತಿಗಳಿಗೆ ಸಂಬಂಧಿಸಿರುವ ವಿಷಯಗಳನ್ನು ಹೊರತುಪಡಿಸಿ ಬೇರೆ ವಿಷಯಗಳ ಬಗ್ಗೆ ಸಂಸತ್ತು ಜಮ್ಮು ಕಾಶ್ಮೀರಕ್ಕೆ ಅನ್ವಯವಾಗುವಂತೆ ಕಾನೂನನ್ನು ರಚಿಸಬಾರದು. | ಭಾರತದ ಸಂಸತ್ತು ಜಮ್ಮು ಕಾಶ್ಮೀರ ಸಹಿತ ಯಾವುದೇ ರಾಜ್ಯದ ಹಿತಕ್ಕೆ ಕಾನೂನು ಮಾಡಲು ಅಧಿಕಾರವನ್ನು ಹೊಂದಿದೆ. ಸಂಸತ್ತಿನ ಈ ಅಧಿಕಾರವನ್ನು ಪ್ರಶ್ನಿಸಲು ಯಾವ ರಾಜ್ಯಗಳಿಗೂ ಅಧಿಕಾರವಿಲ್ಲ. |
| ಜಮ್ಮು ಕಾಶ್ಮೀರವು ದಕ್ಷಿಣ ಮತ್ತು ಮಧ್ಯ ಏಷ್ಯಾದ ನಡುವಿನ ಸೇತುವೆಯಾಗಿದೆ. ಈ ಸೇತುವೆಯನ್ನು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. | ಜಮ್ಮು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ, ಅದು ಮಧ್ಯ ಏಷ್ಯಾದ ಮಹಾದ್ವಾರವಾಗಿದೆ. ಆದರೆ ವರದಿಯು ಜಮ್ಮು ಕಾಶ್ಮೀರವನ್ನು ಎರಡು ಭೂಭಾಗಗಳನ್ನು ಜೋಡಿಸುವ ಕೊಂಡಿ ಎಂಬಂತೆ ಚಿತ್ರಿಸಿ ಅದು ಭಾರತದ ಅಂಗವಲ್ಲವೆಂಬ ಸಂದೇಶವನ್ನು ನೀಡಿದೆ. |
| ನಿಯಂತ್ರಣ ರೇಖೆಯ ಸುತ್ತಮುತ್ತಲಿನ ಎಲ್ಲಾ ಮಾರ್ಗಗಳನ್ನು ಮುಕ್ತಗೊಳಿಸುವುದು, ನಾಗರಿಕರ ಮುಕ್ತ ಪ್ರವೇಶ, ವ್ಯಾಪಾರ ವಹಿವಾಟುಗಳಿಗೆ ವಿಶೇಷ ಪರವಾನಗಿ ಜಾರಿ ಮಾಡುವುದು. ರೇಖೆಯ ಆಸುಪಾಸಿನಲ್ಲಿ ರೈಲು ಮತ್ತು ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸುವುದು. ಆ ಮೂಲಕ ಅಂತಾರಾಷ್ಟ್ರೀಯ ಸಂಬಂಧಕ್ಕೆ ಹೊಸ ಭಾಷ್ಯ ಬರೆಯುವುದು. | ವ್ಯಾಪಾರ ಮತ್ತು ನಾಗರಿಕರ ಮುಕ್ತ ಪ್ರವೇಶದ ಹೆಸರಿನಲ್ಲಿ ಗಡಿರೇಖೆಯನ್ನು ಮುಕ್ತಗೊಳಿಸುವುದೆಂದರೆ ಪಾಕಿಸ್ಥಾನದ ಕುಮ್ಮಕ್ಕಿನ ಭಯೋತ್ಪಾದಕರಿಗೆ ರತ್ನಗಂಬಳಿ ಹಾಸಿದಂತೆಯೇ ಸರಿ. ರಸ್ತೆ ಮತ್ತು ರೈಲು ಸಂಪರ್ಕಗಳಿಂದ ಭಯೋತ್ಪಾದಕರಿಗೆ ಪ್ರಯೋಜನವಾಗಬಹುದೇ ಹೊರತು, ನಾಗರಿಕರು ಧೈರ್ಯದಿಂದ ಓಡಾಡಲಂತೂ ಸಾಧ್ಯವಿಲ್ಲ. |
| ಅತಿ ಶೀಘ್ರದಲ್ಲಿ ಭಾರತ ಸರ್ಕಾರ ಮತ್ತು ಪ್ರತ್ಯೇಕತಾವಾದಿಗಳ ಒಕ್ಕೂಟವಾಗಿರುವ ಹುರಿಯತ್ ಕಾನ್ಫರೆನ್ಸ್ ನಡುವೆ ಮಾತುಕತೆಗಳು ಆರಂಭವಾಗಬೇಕು ಮತ್ತು ಅವುಗಳ ನಡುವೆ ಸತತ ಸಂಪರ್ಕ ಎಂದೆಂದಿಗೂ ಇರಬೇಕು. ಈ ಮೂಲಕ ಪಾಕಿಸ್ಥಾನ ಮತ್ತು ಪಾಕ್ ಆಕ್ರಮಿತ ಜಮ್ಮು ಕಾಶ್ಮೀರದ ಮಧ್ಯೆ ಸಂಪರ್ಕ ಸಾಧಿಸಲು ಸುಲಭವಾಗುತ್ತದೆ. | ಹುರಿಯತ್‌ನ ಜೊತೆ ಸಂವಾದಕಾರರು ಮಾತುಕತೆ ನಡೆಸುವ ಅವಶ್ಯಕತೆಯೇ ಇರಲಿಲ್ಲ. ಪಾಕ್ ಆಕ್ರಮಿತ ಜಮ್ಮು ಕಾಶ್ಮೀರವನ್ನು ನಮ್ಮ ವಶಕ್ಕೆ ತೆಗೆದುಕೊಳ್ಳಬೇಕೇ ಹೊರತು, ಪಾಕಿಸ್ಥಾನದೊಂದಿಗೆ ಮೈತ್ರಿಯೇಕೆ? ಹುರಿಯತ್‌ಗೆ ಮಣೆ ಹಾಕಿದಲ್ಲಿ ಕಾಶ್ಮೀರ ವಿಭಜನೆಗೆ ನಾಂದಿ ಹಾಡಿದಂತೆಯೇ! |
| ಬಂಧನದಲ್ಲಿರುವ ಕಲ್ಲು ತೂರಾಟಗಾರರನ್ನು ಮತ್ತು 'ರಾಜಕೀಯ ಖೈದಿ'ಗಳನ್ನು ಬಿಡುಗಡೆ ಮಾಡಬೇಕು. ಭಯೋತ್ಪಾದನಾ ಕೃತ್ಯ ತ್ಯಜಿಸಲು ಸಿದ್ಧರಾದವರಿಗೆ ಕ್ಷಮಾದಾನ ನೀಡಬೇಕು. ಭಯೋತ್ಪಾದನಾ ತರಬೇತಿ ಪಡೆಯಲು ಗಡಿಯಾಚೆ ಹೋಗಿರುವ ಕಾಶ್ಮೀರಿ ಯುವಕರನ್ನು ಮರಳಿ ಕರೆತಂದು ಅವರಿಗೆ ಪುನರ್ವಸತಿ ವ್ಯವಸ್ಥೆ ಕಲ್ಪಿಸಬೇಕು. | ಇವೆಲ್ಲವೂ ಸಂವಾದಕಾರರು ಹೇಳುವ ಮಾತುಗಳಲ್ಲ. ಕಳೆದ ಹಲವಾರು ದಶಕಗಳಿಂದ ಹುರಿಯತ್ ಕಾನ್ಫರೆನ್ಸ್, ಭಯೋತ್ಪಾದಕರು ಮತ್ತು ಕಲ್ಲು ತೂರಾಟಗಾರರ ಬೇಡಿಕೆಗಳೇ ಆಗಿವೆ. ತ್ರಿಸದಸ್ಯರ ತಂಡ ಅವರೆಲ್ಲರ ಬೇಡಿಕೆಗಳನ್ನು ಒಟ್ಟು ಮಾಡಿ ಸರ್ಕಾರಕ್ಕೆ ಮುಟ್ಟಿಸಿದೆ. |
| ಜನರ ಸುರಕ್ಷೆಯ ದೃಷ್ಟಿಯಿಂದ ಸೇನೆಯನ್ನು ಜನವಸತಿ, ಕೃಷಿ ಕ್ಷೇತ್ರ ಹಾಗೂ ಗಲಭೆ ಪ್ರದೇಶದಿಂದಲೂ ತೆರವುಗೊಳಿಸಬೇಕು. ಸೈನ್ಯದ ವಿಶೇಷಾಧಿಕಾರ ಕಾನೂನನ್ನು (AFSPA) ಹಿಂಪಡೆಯಬೇಕು. | ರಾಜ್ಯದಲ್ಲಿ ಸಶಸ್ತ್ರ ಪಡೆಗಳ ಕಾರ್ಯ ಶ್ಲಾಘನೀಯವಾಗಿದೆ. ಜಮ್ಮು ಕಾಶ್ಮೀರಕ್ಕಾಗಿ 5000ಕ್ಕೂ ಅಧಿಕ ಯೋಧರ ಬಲಿದಾನವಾಗಿದೆ. ಸಶಸ್ತ್ರ ಪಡೆಗಳ ಕಾರಣದಿಂದ ರಾಜ್ಯದಲ್ಲಿ ಪರಿಸ್ಥಿತಿ ಸುಧಾರಣೆಯಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳುವುದು ಸುರಕ್ಷತೆಯ ದೃಷ್ಟಿಯಿಂದ ಅತ್ಯಂತ ಅಪಾಯಕಾರಿ ಮತ್ತು ದುಬಾರಿಯಾಗಿ ಪರಿಣಮಿಸಲಿದೆ. |